ಮಗುವಿಗೆ ಅದು ಮೊದಲನೆ ಹೆರಿಗೆ, ಮೊದಲನೆ ಹುಟ್ಟೇ ಅಲಾ. ಆದ್ದರಿಂದ ನೋಡು ಆ ಹುಡುಗರಿಗಾಗಿ–ಮಗುವಿಗಾಗಿ ತಾನು ಮಾಡಬೇಕಾಗ್ತದ. ತಾಯಿ ಮೊದಲನೇ ಮಗುವನ್ನ ಎಷ್ಟು ಉತ್ಸಾಹದಿಂದ, ಎಷ್ಟು ಆನಂದದಿಂದ, ಎಷ್ಟು ವಾತ್ಸಲ್ಯದಿಂದ ಜನ್ಮ ಕೊಡ್ತಾಳೋ ಅಷ್ಟೇ ಉತ್ಸಾಹದಿಂದ, ಅಷ್ಟೇ ಆನಂದದಿಂದ, ವಾತ್ಸಲ್ಯದಿಂದ ಎಂಟನೇ ಮಗು ಯಾಕೆ ಪ್ರತಿ ಮಗುವಿಗೂ ಜನ್ಮ ಕೊಡ್ತಾಳೆ. ಇದು ತಾಯಿಯ ದೊಡ್ಡ ಗುಣ.' ಹಿಂಗ ಅಂತಾ ಅಂತಾ ಒಂದು ಮಾತು ಹೇಳಿದ್ರು: 'ಜೀವನಕ್ಕೆ ಬರಬಹುದಾದ ಶಾಪ ಯಾವುದು ಗೊತ್ತದೆ ಏನು?' 'ಆ ಶಾಪ ಇನ್ನೊಬ್ರು ಕೊಡೋದಿಲ್ಲ.' ಜೀವನಕ್ಕೆ ಬರೋ ಶಾಪ ಯಾವುದದೆ? ನನಗೆ ತಿಳಿದಂತೆ ಆ ಪ್ರಶ್ನೆಗೆ ನಾಲ್ಕೈದು ಉತ್ತರಕೊಟ್ಟೆ. ಅವ್ರು ಅವುಗಳನ್ನೇನು ನಿರಾಕರಣ ಮಾಡಲಿಲ್ಲ. ಆದ್ರೆ ಒಂದು ಮಾತು ಹೇಳಿದ್ರು. ಆ ಮಾತು ಹೇಳೊ ಮುಂದ ಒಂದು ಮೋಜಿನ ಮಾತು ಹೇಳಿದ್ರು; 'ನಿನಗ ನೀರು ಕುಡಿದು ಎಂದಾರೂ ಸಂತೋಷ ಆಗ್ಯದೇನು?' ನಾನು ಸ್ವಲ್ಪ ನೆನಪು ಮಾಡ್ಕೊಳ್ಳಲಿಕ್ಕೆ ಪ್ರಯತ್ನ ಪಟ್ಟೆ. ಆಗ ಅವ್ರು ಏನು ಹೇಳಿದ್ರು ಅಂದ್ರ, 'ಯಾವ ದಿವಸ ಮನುಷ್ಯ ರೂಢಿಯಿಂದ ನಡ್ಕೊತಾನೋ ಯಾವ ಕೆಲಸದೊಳಗೂ ಅಂವನಿಗೆ ಆನಂದವೇ ಇಲ್ಲ. ಸೂರ್ಯೋದಯ, ಚಂದ್ರೋದಯ, ನಕ್ಷತ್ರ ಇರಲಿ, ಗಾಳಿ ಇರಲಿ, ಹೊರಗೆ ಹುಲ್ಲಿನ ಮ್ಯಾಲೆ ಬರಿಗಾಲಿನಲ್ಲಿ ನಿಂತ್ರು ಅಂವಗ ತಂಪು ಹತ್ತೋದಿಲ್ಲ. ತಂಗಾಳಿ ಬೀಸಿದ್ರ ಮೈ ಪುಳಕಿತ ಆಗೋದಿಲ್ಲ. ನೀರು ಕುಡಿದ್ರ ಸಂತೋಷ ಆಗೋದಿಲ್ಲ. ಮನುಷ್ಯ ಯಂತ್ರದ್ಹಂಗ ಆಗ್ತಾನಲ್ಲ ಇದು ಭಾಳ ದೊಡ್ಡ ಶಾಪ. ಇದಕ್ಕಿಂತ ದೊಡ್ಡ ಶಾಪ ಇನ್ನೊಂದಿಲ್ಲ ಅಂಬೋದು ನೀವು ತಿಳ್ಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ನಿನ್ನ ಜೀವನ ಮರಗೆಡಬಾರದು ಹಾಗೆ ನೋಡ್ಕೋಬೇಕು. ಕ್ಷಣ ಕ್ಷಣ ಇರಬೇಕು. ನೋಡು ತಮ್ಮಾ ನಂದೊಂದು ಕವಿತಾ ಅದಲ್ಲ. 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ.' ಆ ಕವಿತೆಯೊಳಗೆ ಭಾಳ ದೊಡ್ಡ ಮಾನವ ಜಾತಿಯ ವ್ಯಾಖ್ಯೆ ಅದ. ಏನು ಅಂತ ಕೇಳಿದ್ರ... 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಕೂಡಲೆ ನವೀನ ಜನನ' ಆಗಬೇಕು. ಆದ್ರೆ ಹಾಗೆ ಆಗೋದಿಲ್ಲ. ನಾವು ಎಂತಹ ದುರ್ದೈವಿಗಳು. ಸೃಷ್ಟಿಯಲ್ಲಿ ನಿಸರ್ಗದಲ್ಲಿ ಕ್ಷಣಕ್ಷಣಕ್ಕೂ ಹೊಸತನ ಬರ್ತದ. ಆದ್ರ ನಮ್ಮ ನಮ್ಮ ಜೀವನಗಳಲ್ಲಿ ಮಾತ್ರ ನಾವು ಅದೇ ತರಹ. ನಿನ್ನೆ ಉಂಡದ್ದೇ ಊಟ ನಿನ್ನೆ ಮಲಗಿದ್ದೇ ನಿದ್ದೆ. ತಮ್ಮಾ ನಿನ್ನಿನ ನಿದ್ದಿಗಿಂತ ಇವತ್ತಿನ ನಿದ್ದಿ ಹೊಸ ನಿದ್ದಿಯಾಗಬೇಕು. ನಿನ್ನೆ ಉಂಡ ಊಟಾನೇ ನಾವು ಉಂಡಿರಬಹುದು. ಆದ್ರೆ ನಾವು ಹೊಸದಾಗಿ ಊಟ ಮಾಡಬೇಕು. ಜೀವನ ಹೊಸದು ಆಗಬೇಕು. ನಿತ್ಯ ನಿತ್ಯ ಹೊಸದು ಆಗಬೇಕು ಅನ್ನೋದು ಬಹಳ ಮಹತ್ವದ್ದೆ. ಅದು ಆಗಬೇಕಾತಂದ್ರ ಹ್ಯಾಗೆ ದೇಹ ಸ್ನಾನ ಮಾಡಿದ ಮೇಲೆ ಶುದ್ಧ ಆಗ್ತದಲ ಹಾಗೆ ಮನಸ್ಸು ಸ್ನಾನ ಮಾಡಲಿಕ್ಕೆ ಕಲೀಬೇಕಪ್ಪ' ಹೀಗೆ ಅನೇಕ ಸಂಗತಿಗಳನ್ನ ಉದಾಹರಣೆ ಮೂಲಕವಾಗಿ, ಕಥೆಗಳ ಮೂಲಕವಾಗಿ ಹೇಳ್ತಾ ಇದ್ರು.

★★★

ಅವರು ಒಂದು ಮೋಜಿನ ಮಾತು ಹೇಳಿದ್ರು. 'ನೋಡು ಪ್ರಶ್ನೆಗಳು ಇರ್ತಾವಲ್ಲ. ಆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಯಾರಿಂದಲೂ ಹುಡುಕಲಿಕ್ಕೆ ಹೋಗಬ್ಯಾಡ ನೀನು. ನೀನು ಉತ್ತರ ಕಂಡ್ಕೊಳ್ಳಲಿಕ್ಕೆ ಪ್ರಯತ್ನ ಮಾಡು. ಅದು ಭಾಳ ಮಹತ್ವದ ಸಂಗತಿ. ಉತ್ತರಗಳು ನಿನ್ನವಾದ್ರೆ ನೀನು ಕಣ್ಣು ತೆಗೆದು ನಡ್ಕೊತಿ.' ಹೀಗೆಲ್ಲಾ ಹೇಳ್ತಾ ಇದ್ರು.

ಇನ್ನೊಂದು ನೆನಪಿಗೆ ಬರ್ತೇನಿ. ಒಂದು ದಿವಸ ಬೆಳಗು ಮುಂಜಾನೆ ನಾವಿಬ್ರೂ ಕಾಲೇಜಿಗೆ ಹೋದ್ವಿ. ಸೂಟಿ ಇತ್ತು ಆವತ್ತು. ಲಗು ಹೋದೇವು. ನಮ್ಮ ದಯಾನಂದ ಕಾಲೇಜಿಗೆ ದೊಡ್ಡ